OS No. 8122/2017
P.W.1

**ದಿನಾಂಕ 11.04.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ವಿ.ಬಿ ವಕೀಲರಿಂದಃ**

ವಾದಿ ಸಂಸ್ಥೆಯು 01.10.2020 ರ ಮೊದಲು ಪ್ರೊಪ್ರೈಟರ್ ಕನ್ಸ್ ವಿದ್ದು ನಂತರ ಕಂಪನಿಯಾಗಿ ಮಾರ್ಪಟ್ಟಿರುತ್ತದೆ. ಕಂಪನಿಯಲ್ಲಿ ಒಟ್ಟು 12 ಸಾವಿರ ಜನ ಉದ್ಯೋಗಿಗಳು ಇರುತ್ತಾರೆ. 2013 ಮತ್ತು 2016 ರ ನಡುವೆ ಅಂದಾಜು ಸುಮಾರು 8000 ಜನ ಉದ್ಯೋಗಿಗಳು ವಾದಿ ಕಂಪನಿಯಲ್ಲಿ ಇದ್ದರು. ವಾದಿ ಕಂಪನಿಗೆ ಇಎಸ್ ಐ ಕಾಯಿದೆಯು ಅನ್ವಯವಾಗುತ್ತದೆ.

ವಾದಿ ಕಂಪನಿಯಲ್ಲಿ ಬುಕ್ಸ್ ಆಫ್ ಅಕೌಂಟ್ಸ್ ನ್ನು ಮೇನ್‌ಟೇನ್ ಮಾಡಲಾಗುತ್ತದೆ. 2013 ಮತ್ತು 2016 ರ ವ್ಯವಹಾರಕ್ಕೆ ಸಂಬಂಧಪಟ್ಟಂತೆ ದಾಖಲೆಗಳು ಇರುತ್ತವೆ. ಸದರಿ ಅವಧಿಯಲ್ಲಿ ಇಎಸ್ ಐ ವಂತಿಕೆಯನ್ನು ಕಟ್ಟಿರುತ್ತೇವೆ. ವಾದಿ ಕಂಪನಿಯ ಬೆಂಗಳೂರು ಶಾಖೆಗೆ *2013* ಮತ್ತು *2016* ರ ಅವಧಿಯಲ್ಲಿ ಉದ್ಯೋಗಿಗಳನ್ನು ನೇಮಿಸಿರುವ ಬಗ್ಗೆ ದಾಖಲೆಗಳು ಇರುತ್ತವೆ. ಬೆಂಗಳೂರು ಶಾಖೆಯಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ಗುರುತಿನ ಚೀಟಿ ಮತ್ತು ಎಂಪ್ಲಾಯಿಮೆಂಟ್ ಕಾರ್ಡ್‌ನ್ನು ಕೊಟ್ಟಿರುತ್ತೇವೆ. ಬೆಂಗಳೂರು ಶಾಖೆಯಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಹಾಜರಿ ಪುಸ್ತಕವನ್ನು ಇಟ್ಟಿರುತ್ತೇವೆ.

This is a True Copy of the Court Records Online. Authenticated @ districts.ecourtsindia.com/cnr/KABC010292912017/truecopy/order-7.pdf

2013 ರಲ್ಲಿ ವಾದಿ ಕಂಪನಿಗೆ 4 ರಿಂದ 7 ನೇ ಮಹಡಿಯನ್ನು ಮಾತ್ರ ಕೆಲಸ ಮಾಡಲು ಗುತ್ತಿಗೆ ಕೊಟ್ಟಿತ್ತು ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿರುವ ಕಾರಿಜಾಡಂ ಅನ್ವಯ 4 ರಿಂದ 7 ನೇ ಮಹಡಿಯನ್ನು ಮಾತ್ರ ವಾದಿ ಕಂಪನಿಗೆ ಗುತ್ತಿಗೆಗೆ ಕೊಡಲಾಗಿರುತ್ತದೆ ಎಂದರೆ ಸರಿ. 4 ನೇ ಮಹಡಿಯಿಂದ ಕೆಳಗಿನ ಮಹಡಿಯಲ್ಲಿ ಕಾಮಗಾರಿ ನಡೆಯುತ್ತಿತ್ತು (ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಮುಗಿದಿರುತ್ತದೆ ಎಂದು ನುಡಿದಿರುತ್ತಾರೆ).ಎಂದರೆ ಸರಿ. ಕೆಲಸ ಮಾಡಲು ಗುತ್ತಿಗೆ ಕೊಟ್ಟ ಅವಧಿಯು 01.12.2013 ರಿಂದ 30.11.2015 ರವರೆಗೆ ಇದ್ದು, ನಂತರ ಆಗಸ್ಟ್ 2016 ರವರೆಗೆ ವಿಸ್ತರಿಸಲಾಗಿರುತ್ತದೆ ಎಂದರೆ ಸರಿ.

ಬೆಂಗಳೂರಿನ ಶ್ರೀರಾಮಪುಂ ಕಛೇರಿಯು ನಾವು ಗುತ್ತಿಗೆ ಪಡೆದ ಮೂರು ತಿಂಗಳವರೆಗೆ ಕಾರ್ಯನಿರ್ವಹಿಸಿರುತ್ತದೆ. ನಂತರ ಸದರಿ ಕಛೇರಿಯು ಮುಚ್ಚಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಬೆಂಗಳೂರಿನ ಶ್ರೀರಾಮಪುಂ ಕಛೇರಿಯಲ್ಲಿ ನಾನು ಕೆಲಸ ಮಾಡಿರುವ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಗುತ್ತಿಗೆ ಕೆಲಸಕ್ಕೆ ಒಟ್ಟು ಲಭ್ಯವಿರುವ ಜಾಗವು ಮುಖ್ಯ ಕಛೇರಿಯಲ್ಲಿ 2847 ಚದರ ಮೀಟರ್ ಮತ್ತು ಎಲ್ಲಾ ಕಛೇರಿಗಳ ಒಟ್ಟು ಲಭ್ಯವಿರುವ ಜಾಗವು 6143.58 ಚದರ ಮೀಟರ್ ಎಂದರೆ ಸರಿ.

ನಾವು ಕೆಲಸ ಮಾಡಿದ್ದು ಪ್ರಾದೇಶಿಕ ಕಛೇರಿಯು 4 ರಿಂದ 7 ನೇ ಮಹಡಿಯಲ್ಲಿ ಮಾತ್ರ ಎನ್ನು(ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು

This is a True Copy of the Court Records Online. Authenticated @ districts.ecourtsindia.com/cnr/KABC010292912017/truecopy/order-7.pdf

ಮುಗಿದಿರುತ್ತದೆ ಎಂದು ನುಡಿದಿರುತ್ತಾರೆ).ವುದು ಸರಿಯಲ್ಲ. ಪ್ರಾದೇಶಿಕ ಕಛೇರಿಯಲ್ಲಿ 2847 ಚದರ ಮೀಟರ್ ಕ್ಕಿಂತ ಹೆಚ್ಚು ಸ್ಥಳದಲ್ಲಿ ಕೆಲಸ ಮಾಡಿರುತ್ತೇವೆ ಎನ್ನುವುದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ನಿ.ಪಿ. 2 ರನ್ವಯ ನಾವು 4 ನೇ ಮಹಡಿಗಿಂತ ಕೆಳಗಿನ ಮಹಡಿಯಲ್ಲಿ ಕೆಲಸ ಮಾಡಿರುವುದಿಲ್ಲ ಎಂದರೆ ಸರಿ.

ಟೆಂಡರ್ ಅನ್ವಯ ಚದರ ಮೀಟರ್ ಗೆ 1 ವರ್ಷದ ಅವಧಿಗೆ 37 ರೂ.ಗಳಂತೆ ಒಪ್ಪಂದವಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಒಂದು ವರ್ಷದ ನಂತರ ಪ್ರತಿಶತ 10 ರಂತೆ ಹೆಚ್ಚಿಸಬೇಕು ಎಂದು ಇರುತ್ತದೆ ಎಂದು ಸ್ವತಃ ಹೇಳುತ್ತಾರೆ. ನಿ.ಪಿ.1 ರನ್ವಯ ಒಂದು ವರ್ಷದ ನಂತರ ಪ್ರತಿಶತ 10 ರಂತೆ ಬೆಲೆ ಹೆಚ್ಚಿಸಬೇಕು ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಒಪ್ಪಂದವು ಎರಡು ವರ್ಷಗಳವರೆಗೆ ಇರುತ್ತದೆ ಆದರೆ ಒಂದು ವರ್ಷದ ನಂತರ ಪ್ರತಿಶತ 10 ರಂತೆ ಬೆಲೆ ಹೆಚ್ಚಿಸಬೇಕು ಎಂದು ಇರುತ್ತದೆ. 2016 ರವರೆಗೂ ನಾವು ಒಪ್ಪಿಕೊಂಡ ದರ ಚದರ ಮೀಟರ್ ಗೆ 37 ರೂ. ಮಾತ್ರ ಎಂದರೆ ಸರಿಯಲ್ಲ ಕೆಲಸವು ತೃಪ್ತಿದಾಯಕವಾಗಿದ್ದರೆ ಮಾತ್ರ ಪ್ರತಿಶತ 10 ಬೆಲೆಯನ್ನು ಹೆಚ್ಚುವರಿಯಾಗಿ ಕೊಡಬೇಕು ಎಂದು ಇರುತ್ತದೆ ಎಂದರೆ ಸರಿಯಲ್ಲ.

3 ನೇ ಮಹಡಿಯಿಂದ ನೆಲ ಮಹಡಿವರೆಗೆ ಹಾಗೂ ಪಾರ್ಕಿಂಗ್ ಜಾಗ ಮತ್ತು ಟೆರೆಸ್ ಗಳನ್ನು ಸ್ವಚ್ಚಗೊಳಿಸಲು ಬರವಣಿಗೆಯಲ್ಲಿ ಕೊಟ್ಟಿದ್ದರು. ಸದರಿ ದಾಖಲೆಗಳನ್ನು

This is a True Copy of the Court Records Online. Authenticated @ districts.ecourtsindia.com/cnr/KABC010292912017/truecopy/order-7.pdf

ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಪ್ರತಿವಾದಿ ಕಂಪನಿಯು ನಮಗೆ ಯಾವುದೇ ಪತ್ರ ಬರೆದಿಲ್ಲ ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಬಿಲ್ ಗಳನ್ನು ಸೆಟಲ್ ಮಾಡಲು ನಿರ್ದೇಶಕರು ಮೀಟಿಂಗ್ ಗೆ ಕರೆದಿದ್ದರು ಎಂದರೆ ಸರಿ. ಸದರಿ ಮೀಟಿಂಗ್ ನಲ್ಲಿ ನಾವು ಕೆಲಸ ಮಾಡಿದ ಕಟ್ಟಡಗಳಿಗೆ ಮಾತ್ರ ರಾಜಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ.

ಪ್ರತಿವಾದಿ ಕಂಪನಿಯು ನಾವು ಕೊಟ್ಟ ಬಿಲ್ ಪ್ರಕಾರ ಹಣ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಕಂಪನಿಯು 91,47,986.58/- ರೂಗಳನ್ನು ಸಂದಾಯ ಮಾಡಿರುತ್ತಾರೆ ಎಂದರೆ ಸರಿ. ಹೆಚ್ಚುವರಿ 16,76,458.42/- ಕೇಳಿರುವುದಕ್ಕೆ ಯಾವುದೇ ಅದಾರವಿಲ್ಲ ಎಂದರೆ ಸರಿಯಲ್ಲ. ಹೆಚ್ಚುವರಿ 16,76,458.42/- ಕೇಳಿರುವುದಕ್ಕೆ ನಮ್ಮ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. 16,76,458.42/- ಕ್ಕೆ ಸಂಬಂಧಿಸಿದಂತೆ ಇಎಸ್ ಐ ವಂತಿಕೆ ಕೊಟ್ಟಿರುತ್ತೇವೆ. ಇದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹೆಚ್ಚುವರಿ 16,76,458.42/- ಕ್ಕೆ ಸಂಬಂಧಿಸಿದಂತೆ ಯಾವುದೇ ಬುಕ್ಸ್ ಆಫ್ ಅಕೌಂಟ್ಸ್ ಮತ್ತು ಇತರೆ ದಾಖಲೆಗಳನ್ನು ಇಎಸ್ ಐ ಅಧಿಕಾರಿಗಳಿಗೆ ಕೊಟ್ಟಿರುತ್ತೇನೆ. ಆದರೆ ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಸದರಿ ಹಣಕ್ಕೆ ಸಂಬಂಧಪಟ್ಟಂತೆ ಇಎಸ್ ಐ ಅಧಿಕಾರಿಗಳಿಗೆ ಯಾವುದೇ ದಾಖಲೆಗಳನ್ನು ಕೊಟ್ಟಿರುವುದಿಲ್ಲ, ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC010292912017/truecopy/order-7.pdf

www.ecourtsindia.com

ನಾನು ಈಗ ನೋಡುತ್ತಿರುವ ದಾಖಲೆಯು ಮೀಟಿಂಗ್ ನ ನಡಾವಳಿಗಳು ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ **ನಿ.ಡಿ.1** ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯೆ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯೆ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾಗರಾಜ್ ರವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ನಾನು ದಾಖಲೆಗಳನ್ನು ನೋಡಿ ಸಾಕ್ಷ್ಯ ಹೇಳುತ್ತಿದ್ದೇನೆ, ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ನನಗೆ ಯಾವುದೇ ಹಣ ಕೊಡಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಮುಗಿದಿರುತ್ತದೆ ಎಂದು ನುಡಿದಿರುತ್ತಾರೆ).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**(ಸುಭಾಷ ಸಂಕದ)**
**65 ನೇ ಅ.ನ.ಸಿ.ಸೆ.ನ್ಯಾಯಾಧೀಶರು(ಸಿಸಿಹೆಚ್-66)**
**ಬೆಂಗಳೂರು ನಗರ.**

This is a True Copy of the Court Records Online. Authenticated @ districts.ecourtsindia.com/cnr/KABC010292912017/truecopy/order-7.pdf